**S.C. 67/2021.**

# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.

## ಸತ್ರ ಮೊಕದ್ದಮೆ ಸಂಖ್ಯೆಃ 67/2021.

| | | | |
|---|---|---|---|
| ಹೆಸರು | : | ಜಗದೀಶ ಹಳೇಮನಿ | ಫ್ರಾಸಾ-01 |
| ತಂದೆಯ ಹೆಸರು | : | ಪರಪ್ಪ | ಚಾಸಾ-01 |
| ವಯಸ್ಸು | : | 51 ವರ್ಷ | |
| ಉದ್ಯೋಗ | : | ಖಾಸಗಿ ಕೆಲಸ | |
| ವಾಸಸ್ಥಳ | : | ಸವದತ್ತಿ | |

ದಿನಾಂಕಃ 23-11-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿ ಪರಿಚಯ. ಮೃತ ಪ್ರಭಾಕರ ನನ್ನ ಅಣ್ಣನ ಮಗ. ಅವನು 7 ವರ್ಷಗಳ ಹಿಂದೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಪ್ರಭಾಕರ ಸಾಯುವ 3-4 ವರ್ಷಗಳ ಮೊದಲು ಆರೋಪಿ ಹಾಗೂ ಪ್ರಭಾಕರ ಸವದತ್ತಿಯಲ್ಲಿ ಟ್ರಾನ್ಸಪೋರ್ಟ ವ್ಯವಹಾರ ಮಾಡುತ್ತಿದ್ದರು. ಇಬ್ಬರೂ ಸೇರಿ ಟ್ರಾನ್ಸಪೋರ್ಟ ವ್ಯವಹಾರ ನೋಡಿಕೊಳ್ಳುತ್ತಿದ್ದರು ಹಾಗೂ ಇಬ್ಬರೂ ಸೇರಿ ಸಾಲ ಮಾಡಿದ್ದರು, ಎಷ್ಟು ಸಾಲ ಮಾಡಿದ್ದರು ನನಗೆ ಗೊತ್ತಿಲ್ಲ.

ನಾನು ಒಂದು ಸಲ 3 ಲಕ್ಷ ರೂಪಾಯಿ ಹಾಗೂ ಇನ್ನೊಂದು ಸಲ 5 ಲಕ್ಷ ರೂಪಾಯಿಗಳನ್ನು ಪ್ರಭಾಕರ ಸಾಯುವ 1 ವರ್ಷದ ಮೊದಲು ಪ್ರಭಾಕರನಿಗೆ ಸಾಲ ತೀರಿಸಲು ಹಣ ಕೊಟ್ಟಿದ್ದೆ ಅವನು ಆರೋಪಿಗೆ ಕೊಟ್ಟಿದ್ದ. ಆರೋಪಿ ನನ್ನ ಮಗನಿಗೆ ಇನ್ನೂ ಸಾಲದ ಹಣ ಮುಟ್ಟಿಲ್ಲ ಬಡ್ಡಿ ಹಾಗೂ ಚಕ್ರಬಡ್ಡಿ ನೀಡುವಂತೆ ಕಿರುಕುಳ ನೀಡುತ್ತಿದ್ದ. ಸದರಿ ವಿಷಯವನ್ನು ಸಾಯುವ 15-20 ದಿನಗಳ ಪೂರ್ವದಲ್ಲಿ ಪ್ರಭಾಕರ ನನಗೆ ಹೇಳಿದ್ದ.

ದಿನಾಂಕಃ 05-01-2017 ರಂದು ಪ್ರಭಾಕರ ತನ್ನ ತಂಗಿಯ ಮನೆ ವಿಜಯಪುರಕ್ಕೆ ಹೋಗುತ್ತೇನೆ ಎಂದು ಬೆಳಗ್ಗೆ 11.00 ಗಂಟೆಗೆ ಹೋದ. ಮರುದಿನ 11.00 ಗಂಟೆಗೆ ನಾನು ಮನೆಯಲ್ಲಿದ್ದಾಗ ಶಿವಗಂಗಾ ಲಾಡ್ಜ ಹುನಗುಂದ

ಇವರು ಪೋನ್ ಮಾಡಿ ನಿಮ್ಮ ಅಣ್ಣನ ಮಗ ನಿನ್ನೆ ರಾತ್ರಿ 10.00 ಗಂಟೆಗೆ ನಮ್ಮ ಲಾಡ್ಜನಲ್ಲಿ ರೂಮು ಪಡೆದಿದ್ದ ಬೆಳಗ್ಗೆ ನೋಡಿದಾಗ ಅವನು ತೀರಿಕೊಂಡಿದ್ದಾನೆ ಎಂದು ತಿಳಿಸಿದರು. ನಾನು, ಚಾಸಾ-10 ರಿಂದ 12 ಹಾಗೂ ಇತರರು ಸಂಜೆ 6.00 ಗಂಟೆಗೆ ಹುನಗುಂದಕ್ಕೆ ಬಂದು ನೋಡಲಾಗಿ ಅವನು ರೂಮ ನಂ.101 ರಲ್ಲಿ ಅವನ ಶವ ಕಂಡು ಬಂತು. ಅವನ ಮೈಮೇಲೆ ಬನಿಯನ್ ಮತ್ತು ಅಂಡರವೇರ್ ಇದ್ದು ಬಾಯಲ್ಲಿ ಬುರುಗು ಬಂದಿತ್ತು. ಶವ ಮುಖ ಕೆಳಗೆ ಮಾಡಿ ಬಿದ್ದಿತ್ತು.

ಆ ಕುರಿತು ಪಿರ್ಯಾದಿ ಬರೆದಿದ್ದು ಅದನ್ನು ನಿಪಿ-1 ಅಂತಾ, ಸಹಿಯನ್ನು ನಿಪಿ-1(ಎ) ಅಂತಾ ಗುರುತಿಸಲಾಯಿತು. ಪಿರ್ಯಾದಿ ನಂತರ ಪೋಲಿಸರು ಪಂಚನಾಮೆ ಮಾಡಿ ಪಿ.ಎಂ ಗೆ ಕಳುಹಿಸಿದರು. ಹುನಗುಂದ ಲಾಡ್ಜನಲ್ಲಿ ಮೃತನ ಪ್ಯಾಂಟಿನಲ್ಲಿ ಡೆತ್ ನೋಟ್ ಸಿಕ್ಕಿದೆ. ನನ್ನ ಸಾವಿಗೆ ಆರೋಪಿಯ ಕಿರುಕುಳವೇ ಕಾರಣ ಎಂದು ಬರೆದಿದ್ದ. 8 ಪೋಟೋಗಳನ್ನು ನೋಡಿ ನಿಪಿ-2 ರಿಂದ 9 ಅಂತಾ ಗುರುತಿಸಲಾಯಿತು. ಸದರಿ ಡೆತ್ ನೋಟ್ ನ್ನು ಅದನ್ನು ನಿಪಿ-10 ಅಂತಾ ಗುರುತಿಸಲಾಯಿತು. ಅದರ ಮೇಲಿನ ಪ್ರಭಾಕರನ ಸಹಿ ನೋಡಿ ಗುರುತಿಸಿದ್ದೇನೆ, ಪ್ರಭಾಕರನ ಸಹಿಯನ್ನು ನಿಪಿ-10(ಎ) ಅಂತಾ ಗುರುತಿಸಲಾಯಿತು. ಪೋಲಿಸರು ಮೃತನ ಕೈಬರಹದ ದಾಖಲೆ ಕೇಳಿದ್ದರಿಂದ ಒಂದು ನೋಟ್ ಬುಕ್ ಹಾಜರುಪಡಿಸಿದ್ದು ಅದನ್ನು ನಿಪಿ-11 ಅಂತಾ ಗುರುತಿಸಲಾಯಿತು.

**<u>ಪಾಟಿಸವಾಲುಃ ಆರೋಪಿತರ ಪರ ಶ್ರೀ. ಬಿ.ಬಿ.ಎಂ ವಕೀಲರಿಂದ.</u>**

ನಾನು ಸವದತ್ತಿಯಲ್ಲಿ ಜ್ಯೋತಿ ಅರ್ಬನ್ ಸೊಸೈಟಿ ಬ್ಯಾಂಕನ ಮ್ಯಾನೇಜರ ಇರುತ್ತೇನೆ. ಮೃತ ಪ್ರಭಾಕರ ಹಾಗೂ ಅವನ ಹೆಂಡತಿ ಮಕ್ಕಳು ಒಟ್ಟಿಗೆ 10 ಜನ ವಾಸಿಸುತ್ತಿದ್ದೆವು. ಪ್ರಭಾಕರ ಹಾಗೂ ಆರೋಪಿ ಸೇರಿ ನಡೆಸುತ್ತಿದ್ದರು ಎನ್ನಲಾದ ಟ್ರಾನ್ಸಪೋರ್ಟ ಬಿಜಿನೆಸ್‌ಗೆ ಹೆಸರು ಇರಲಿಲ್ಲ. ಆರೋಪಿ ಹಾಗೂ ಪ್ರಭಾಕರ ಸೇರಿ ಪಾರ್ಟನರಶಿಪ್ ಡೀಡ್ ಮಾಡಿಲ್ಲ. ಟ್ರಾನ್ಸಪೋರ್ಟ ಬಿಜಿನೆಸಗೆ ಒಬ್ಬ ಗುಮಾಸ್ತ ಇರುತ್ತಾನೆ ಎನ್ನುವುದು ಸರಿಯಲ್ಲ. ಟ್ರಾನ್ಸಪೋರ್ಟ ಕಚೇರಿಯಲ್ಲಿ ರಿಸಿಪ್ಟ ಪುಸ್ತಕ

ಹಾಗೂ ರೆಜಿಸ್ಟರ ಇರುತ್ತದೆ ಎನ್ನುವುದು ನಿಜ. ರಿಸಿಪ್ಟ ಪುಸ್ತಕ ಹಾಗೂ ರೆಜಿಸ್ಟರನ್ನು ಪೋಲಿಸರಿಗೆ ನೀಡಿಲ್ಲ.

ಆರೋಪಿ ಹಾಗೂ ಪ್ರಭಾಕರ ಟ್ರಾನ್ಸಪೋರ್ಟ ವ್ಯವಹಾರದ ಬಗ್ಗೆ ಹಾಗೂ ಬಡ್ಡಿ ಸಾಲ ತಂದ ಬಗ್ಗೆ ಯಾವುದೇ ದಾಖಲೆಗಳನ್ನು ಪೋಲಿಸರಿಗೆ ನೀಡಿಲ್ಲ. 4 ಲಾರಿಗಳು ಪಾರ್ಟನರಶಿಪ್ ಹಾಗೂ 2 ಲಾರಿಗಳು ಪ್ರಭಾಕರ ಸ್ವಂತ ಲಾರಿಗಳಾಗಿದ್ದವು. ಸದರಿ 4 ಲಾರಿಗಳು ಪಾರ್ಟನರಶಿಪ್ ನಲ್ಲಿ ತಂದಿದ್ದು ಎಂದು ಹೇಳಿದ್ದು ಅವುಗಳು ಪ್ರಭಾಕರನ ಹೆಸರಿನಲ್ಲಿದ್ದವು. 5 ಲಾರಿಗಳನ್ನು ಲೋನ್ ಮೇಲೆ ತೆಗೆದುಕೊಂಡಿದ್ದೆವು, ಒಂದು ಲಾರಿ ಸ್ವಂತ ದುಡ್ಡು ಕೊಟ್ಟು ಖರೀದಿ ಮಾಡಿದ್ದೆವು. 6 ಲಾರಿಗಳು ಟ್ರಾನ್ಸಪೋರ್ಟ ಬಿಜಿನೆಸಗೆ ಇದ್ದವು ಎಂದು ತೋರಿಸಲು ದಾಖಲೆಗಳನ್ನು ಪೋಲಿಸರಿಗೆ ನೀಡಿಲ್ಲ. ಮಹಾರಾಷ್ಟ್ರದಿಂದ ಲಾರಿಗಳನ್ನು ಎಷ್ಟು ಹಣಕ್ಕೆ ತಂದಿದ್ದರು ಯಾರ ಹೆಸರಿನಲ್ಲಿ ತಂದಿದ್ದರು ನನಗೆ ಗೊತ್ತಿಲ್ಲ. ಸಾಲ ನೀಡುವಾಗ ಸಾಲಗಾರನ ದಾಖಲೆಗಳನ್ನು ಹಾಗೂ ಸಾಲದ ಅರ್ಜಿ ಪರಿಶೀಲಿಸಿ ಸಾಲ ನೀಡುತ್ತೇವೆ. 3 ನೇ ವ್ಯಕ್ತಿಗೆ ಸಾಲ ನೀಡುವುದಿಲ್ಲ.

ನಾನು ಟ್ರಾನ್ಸಪೋರ್ಟ ಅಂಗಡಿಗೆ ಹೋಗಿ ರೆಜಿಸ್ಟರಗಳನ್ನು ಹಾಗೂ ದಾಖಲೆಗಳನ್ನು ಪ್ರಭಾಕರ ಸಾಯುವ 6 ತಿಂಗಳ ಮೊದಲು ನೋಡಿದ್ದೇನೆ. ಸದರಿ ನಾನು ನೋಡಿದ ದಾಖಲೆಗಳನ್ನು ಪೋಲಿಸರಿಗೆ ನೀಡಿಲ್ಲ. ಸದರಿ ದಾಖಲೆಗಳನ್ನು ನೋಡಿದಾಗ ಆರೋಪಿ ಸಾಲ ಪಡೆದಿರುವುದು ಕಂಡು ಬಂತು. ಎಷ್ಟು ಸಾಲ ಆರೋಪಿ ಪಡೆದಿದ್ದ ಎಂದು ಗೊತ್ತಿಲ್ಲ. ಆರೋಪಿ ಮಿಸ್ ಅಪ್ರಾಪ್ರಿಯೇಷನ್ ಮಾಡಿದ ವಿಷಯ ಪೋಲಿಸರಿಗೆ ತಿಳಿಸಿಲ್ಲ, ಆದರೆ ಪ್ರಭಾಕರನ ಮುಂದೆ ನಾನು ಅಸ್ಲಂಗೆ ಹೇಳಿ ಸರಿ ಮಾಡುತ್ತೇನೆ ಎಂದು ಹೇಳಿದೆ.

ಆರೋಪಿ 7-8 ವರ್ಷಗಳಿಂದ ಪರಿಚಯ. ನನ್ನ ಮಗ ಯಾರ ಹತ್ತಿರ ಎಷ್ಟು ಸಾಲ ಪಡೆದಿದ್ದ ಎಂದು ಮಾಹಿತಿ ಇಲ್ಲ. ಶಿವಗಂಗಾ ಲಾಡ್ಜಗೆ ಸಂಜೆ 6.00 ರಿಂದ 7.00 ಗಂಟೆಗೆ ಬಂದೆವು. ನಾನು ಲಾಡ್ಜಗೆ ಹೋದಾಗ ಬಾಗಿಲು ಮುಚ್ಚಿತ್ತು. ಪೋಲಿಸರು ಇದ್ದರು. ಪೋಲಿಸರು ಲಾಡ್ಜನವರ ಕಡೆಯಿಂದ ಬಾಗಿಲು ತೆಗೆಯಿಸಿದರು.

ರೂಮಿನೊಳಗೆ ಬಾಗಿಲು ತೆಗೆದು ಹೋದಾಗ ರಾತ್ರಿ 8.00 ಗಂಟೆಯಾಗಿತ್ತು. ಆಗಲೂ ಪೋಲಿಸರು ಇದ್ದರು. ಸದರಿ ರೂಮು ಡಬಲ್ ಬೆಡ್ ರೂಮು ಎನ್ನುವುದು ನನಗೆ ಗೊತ್ತಿಲ್ಲ. ಪ್ಯಾಂಟ್ ಶರ್ಟು ಕಳೆದು ಗೋಡೆಗೆ ನೇತು ಹಾಕಿದ್ದ. ಹೆಣದ ಅಕ್ಕ-ಪಕ್ಕದಲ್ಲಿ ಒಂದು ಬಾಟ್ಲೆ ಇತ್ತು. ಬೇರೆ ಏನೂ ವಸ್ತುಗಳಿರಲಿಲ್ಲ. ನಿಪಿ-2 ರಿಂದ 9 ಪೋಟೋಗಳಲ್ಲಿ ಶವ ಮುಖ ಕೆಳಗೆ ಮಾಡಿ ಬಿದ್ದಿಲ್ಲ, ಮುಖ ಮೇಲೆ ಮಾಡಿ ಇದೆ ಎನ್ನುವುದು ನಿಜ ಹಾಗೂ ರೂಮು ಡಬಲ್ ಬೆಡ್ ರೂಮು ಇದೆ ಎನ್ನುವುದು ನಿಜ. ನಿಪಿ2 ರಿಂದ 9 ರಲ್ಲಿ ಪ್ಯಾಂಟ ಮತ್ತು ಶರ್ಟು ಗೋಡೆಗೆ ನೇತು ಹಾಕಿರುವುದು ಕಂಡು ಬಂರುವುದಿಲ್ಲ ಎನ್ನುವುದು ನಿಜ. ಸದರಿ ಡೆತ್ ನೋಟ್ ಮೃತನ ಪ್ಯಾಂಟಿನ ಕಿಸೆಯಲ್ಲಿತ್ತು ಅದನ್ನು ಎಷ್ಟು ಗಂಟೆಗೆ ತೆಗೆದಿದ್ದಾರೆ ಗೊತ್ತಿಲ್ಲ. ಸದರಿ ಡೆತ್ ನೋಟನ್ನು ಯಾರು ತೆಗೆದಿದ್ದಾರೆ ಗೊತ್ತಿಲ್ಲ, ಪೋಲಿಸರು ತೆಗೆದಿರಬಹುದು.

ನಾನು ಲಾಡ್ಜನಿಂದ ಪೋಲಿಸಠಾಣೆಗೆ 8.30 ಗಂಟೆಗೆ 15 ಜನರು ಹೋಗಿದ್ದೆವು. ಪಿರ್ಯಾದಿಯನ್ನು ಪೋಲಿಸಠಾಣೆಯಲ್ಲಿ ನಾನೇ ಬರೆದಿದ್ದೇನೆ. ನಾವು 15 ಜನ ಚರ್ಚೆ ಮಾಡಿ ಪಿರ್ಯಾದಿ ಬರೆದಿದ್ದೇವೆ. ಪ್ರಭಾಕರ ಆರೋಪಿಗೆ ಎಷ್ಟು ಹಣ ಸಾಲ ಕೊಟ್ಟಿದ್ದ, ಎಷ್ಟು ಬಡ್ಡಿ ಹಾಗೂ ಚಕ್ರಬಡ್ಡಿ ಅಂತಾ ನನಗೆ ಗೊತ್ತಿಲ್ಲ.

ಡೆತ್ ನೋಟ್ ನಲ್ಲಿ ಸಾಲಗಾರರ ಕಿರುಕುಳ ಅಂತಾ ಬರೆಯಲಾಗಿದೆ ಎನ್ನುವುದು ನಿಜ. ಸಾಲಗಾರರು ಯಾರು ಅಂತಾ ನನಗೆ ಗೊತ್ತಿಲ್ಲ. ಡೆತ್ ನೋಟನ ಪುಟ 2 ರಲ್ಲಿ ಅರ್ಧದಷ್ಟು ಮೇಲಿನ ಭಾಗದ ಅಕ್ಷರಗಳು ದಪ್ಪವಾಗಿದ್ದು ಅರ್ಧಭಾಗ ಚಿಕ್ಕ ಅಕ್ಷರಗಳಿವೆ ಎನ್ನುವುದು ನಿಜ. ಪಿರ್ಯಾದಿ ಕೊಡುವ ಕಾಲದಲ್ಲಿ ಡೆತ್ ನೋಟನ್ನು ನನ್ನ ಕೈಗೆ ಕೊಟ್ಟಿಲ್ಲ. ದೂರಿನಿಂದ ತೋರಿಸಿದ್ದಾರೆ.

ಡೆತ್ ನೋಟನ್ನು ನಾನು ಹಾಗೂ ಪೋಲಿಸರು ಸೇರಿ ಸೃಷ್ಟಿಸಿದ್ದೇವೆ ಎನ್ನುವುದು ಸರಿಯಲ್ಲ. ಈಗ ಡೆತ್ ನೋಟನಲ್ಲಿರುವ ಸಹಿ ಮತ್ತು ಲಾಡ್ಜ ರಿಸಿಪ್ಟನಲ್ಲಿರುವ ಸಹಿ ಎರಡೂ ಒಂದೇ ಇಲ್ಲ ಎನ್ನುವುದು ನಿಜ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ದಾಖಲಾತಿ ಮೇಲೆ ಪ್ರಶ್ನೆಗಳನ್ನು ಕೇಳಲು ಬರುವುದಿಲ್ಲ ಅಂತಾ ಹೇಳಿದ್ದು ಪ್ರತಿರಕ್ಷಾ ವಕೀಲರು ದಾಖಲಾತಿ ಮೇಲೆ ಪ್ರಶ್ನೆಗಳನ್ನು ಕೇಳಲು ಬರುತ್ತದೆ ಎಂದು ಆಕ್ಷೇಪಣೆ ಮಾಡಿರುವುದರಿಂದ ಈ ಹಂತದಲ್ಲಿ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

23-11-2024

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.